**ಸಿ.ಸಿ.ನಂ.389/2025**

**ಪಿ.ಡಬ್ಲೂ-1**

ದಿನಾಂಕ: 08-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ- ಆರೋಪಿ ಪರ ಶ್ರೀ.ಐ.ಎಂ.ಬಿ ವಕೀಲರಿಂದ ಃ**

1. ನನ್ನ ಹೆಂಡತಿ ಹೆಸರು ಭಾರತಿ. ನನ್ನ ಹೆಂಡತಿ ನನ್ನ ಜೊತೆಯಲ್ಲಿದ್ದಾರೆ. ಆರೋಪಿ ಮತ್ತು ನನ್ನ ಹೆಂಡತಿ ಪರಿಚಯಸ್ಥರು ಎಂದರೆ ಸರಿ. ನನ್ನ ಹೆಂಡತಿಯ ಆರೋಪಿಯ ಕಡೆಗೆ ಬಂದು ಹೋಗು ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿಃ 22-12-2025 ರಂದು ನನ್ನ ಪಾಟೀ ಸವಾಲು ಆರೋಪಿ ಪರ ವಕೀಲರು ಮಾಡಿದರು ಎಂದು ನನ್ನ ಹೆಂಡತಿಗೆ ಹೇಳಿದೆನು ಎಂದರೆ ಸರಿ. ಆಗ ನನ್ನ ಹೆಂಡತಿಗೆ ಅವಳ ಮಾತು ಕೇಳಿ ನಾನು ಆರೋಪಿಯ ವಿರುದ್ದ ಸುಳ್ಳು ಕೇಸ ದಾಖಲಿಸಿದ ಬಗ್ಗೆ ವಕೀಲರಿಗೆ ಪಾಟೀ ಸವಾಲಿನಲ್ಲಿ ಗೊತ್ತಾಯಿತು ಎಂದು ಹೇಳಿದೆನು ಎಂದರೆ ಸರಿಯಲ್ಲ. 2025 ಡಿಸೆಂಬರ ಕೊನೆಯವಾರದಲ್ಲಿ ನಮ್ಮ ಗ್ರಾಮದಲ್ಲಿ ಐಯಪ್ಪ ಮಾಲಾಧಾರಿಗಳು ದೊಡ್ಡ ಸಮಾವೇಶ ಮಾಡಿದ್ದು ಅದಕ್ಕೆ ನನ್ನ ಹೆಂಡತಿ ಹೋಗಿದ್ದರು ಎಂದರೆ ಸರಿ. ಆಗ ನನ್ನ ಹೆಂಡತಿಗೆ ಆರೋಪಿ ಭೇಟಿಯಾಗಿದ್ದರು ಎಂದರೆ ಸರಿಯಲ್ಲ. ಸದರಿ ಸಮಾವೇಶಕ್ಕೆ ಆರೋಪಿ ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಸಮಾವೇಶದಲ್ಲಿ ಆರೋಪಿ ಮತ್ತು ನನ್ನ ಹೆಂಡತಿ ಮಧ್ಯೆ ನ್ಯಾಯಾಲಯದಲ್ಲಿ ಆದ ಪಾಟೀ ಸವಾಲಿನ ಬಗ್ಗೆ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಸದರಿ ಸಮಾವೇಶದಲ್ಲಿ ನನ್ನ ಹೆಂಡತಿ ಆರೋಪಿಗೆ ಒಂದು ವೇಳೆ ಇನಷ್ಟು ಹಣ ಕೊಡಲಿಲ್ಲವಾದರೆ ನನ್ನ ಬಳಿ ನಿಪಿ-1 ಕ್ಕೆ ಸಂಬಂಧಿಸಿದ ನಿನ್ನ ಚೆಕ್ಕುಗಳ ಒಂದು ಬುಕ್ಕ ಇದ್ದು ಅದರಲ್ಲಿ ಇರುವ ಚೆಕ್ಕುಗಳನ್ನು ಬಳಸಿಕೊಂಡು ಬೇರೆಯವರ ಹೆಸರಿನಿಂದ ನಿನ್ನ ವಿರುದ್ದ ಬೇರೆ ಚೆಕ್ಕ ಪ್ರಕರಣಗಳನ್ನು ದಾಖಲಿಸುತ್ತೇನ ಎಂದು ಜಗಳವಾಯಿತು ಎಂದರೆ ಸರಿಯಲ್ಲ.

2. ಸಿಂಡಿಕೇಟ ಬ್ಯಾಂಕ ಬಂದ ಆದ ನಂತರ ಆರೋಪಿ ಸಿಂಡಿಕೇಟ ಬ್ಯಾಂಕನ ತನ್ನ ಚೆಕ್ಕ ಬುಕ್ಕನ್ನು ಮನೆಯಲ್ಲಿ ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಆರೋಪಿಗೆ ಭೇಟಿಯಾಗಲು ಅವರ ಮನೆಗೆ ಹೋದಾಗ ಅವಳಿಗೆ ಗೊತ್ತಿಲ್ಲದಂತೆ ಸದರಿ ಚೆಕ್ಕ ಬುಕ್ಕನ್ನು ತೆಗೆದುಕೊಂಡು ಬಂದಿದ್ದರು ಎಂದರೆ

ಸರಿಯಲ್ಲ. ಸದರಿ ವಿಚಾರ ನಮ್ಮ ಗ್ರಾಮದ ಸಮಾವೇಶದಲ್ಲಿ ನನ್ನ ಹೆಂಡತಿ ಆರೋಪಿಗೆ ಹೇಳಿದಾಗಲೆ ಸದರಿ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿಯ ಸದರಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಅವಳಿಂದ 8 ಲಕ್ಷ ಹಣ ಕಬಳಿಸಬೇಕೆಂದು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನನಗೆ 8 ಲಕ್ಷ ರೂಪಾಯಿ ಹಣ ಕೊಡುವ ಸಾಮರ್ಥ್ಯ ನನಗೆ ಇಲ್ಲಾ ಎಂದರೆ ಸರಿಯಲ್ಲ.

3. ನನ್ನ ಹಂಡತಿ ಹಣದ ಲೇವಾದೇವಿ ಮಾಡುವುದಿಲ್ಲ. ಕರ್ನಾಟಕಾ ಬ್ಯಾಂಕ ಅಥಣಿ ಶಾಖೆಯಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ಗೊತ್ತಿಲ್ಲ. ನನ್ನ ಮತ್ತು ಅಮೀರಾಬೇಗ ಮೋಗಲ್‌ರವರ ಮಧ್ಯೆ ಹಣದ ವ್ಯವಹಾರ ಆಗಿತ್ತು. ಸಾಕ್ಷಿಗೆ ಒಂದು ಝರಾಕ್ಸ ಚೆಕ್ಕನ್ನು ತೋರಿಸಲಾಗಿ ಅದರಲ್ಲಿ ತನ್ನ ಹೆಂಡತಿಯ ಹೆಸರು ಇರುವುದಾಗಿ ಗುರುತಿಸಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಝರಾಕ್ಸ ಚೆಕ್ಕನ್ನು ತೋರಿಸಲಾಗಿ ಅದರಲ್ಲಿ ತನ್ನ ಹೆಂಡತಿಯ ಹೆಸರು ಇರುವುದಾಗಿ ಗುರುತಿಸಿದ ಮೇರೆಗೆ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸದರಿ ಮೇಮೊವನ್ನು ಬ್ಯಾಂಕನವರು ನೀಡಿದ್ದಾರೆ ಎಂದರೆ ಸಾಕ್ಷಿ ಅದನ್ನು ಅಲ್ಲಗಳೆಯುತ್ತಾರೆ. ನಮಗೆ ದುಡ್ಡಿನ ಅವಶ್ಯಕತೆ ಇದ್ದಾಗ ನಾವು ಅಮೀರಾಬೇಗ ಮೋಗಲರವರಿಂದ 7 ಲಕ್ಷ ಹಣ ಪಡೆದು ಮರುಪಾವತಿ ಮಾಡಲು ನನ್ನ ಹೆಂಡತಿ ಎರಡು ಚೆಕ್ಕಗಳನ್ನು ನೀಡಿದ್ದು ಸದರಿ ಚೆಕ್ಕಗಳು ಅಮಾನ್ಯವಾಗಿರುವ ಕಾರಣ ನನ್ನ ಹೆಂಡತಿ ವಿರುದ್ದ ಸಿ.ಸಿ ನಂ.2611/2025 ನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ